## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ

**CC No.929/2024**

**CW: 04 PW: 02**

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 27.01.2026**

| | |
|---|---|
| ಹೆಸರು | : ಮರೆಪ್ಪ ದೊಡ್ಡಮನಿ |
| ತಂದೆಯ ಹೆಸರು | : ಮಾರ್ತಾಂಡಪ್ಪ |
| ವಯಸ್ಸು | : 54 |
| ಉದ್ಯೋಗ | : ಕೂಲಿ |
| ವಾಸಸ್ಥಳ | : ಹೊನಗುಂಟ |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ಚಾಸಾ-1 ನನ್ನ ಪುತ್ರಿ. ಚಾಸಾ-5 ನನ್ನ ಹೆಂಡತಿ, ಚಾಸಾ-6 ನನ್ನ ಪುತ್ರ, ಚಾಸಾ-8 ನನ್ನ ಸಹೋದರಿ, ಚಾಸಾ-6 ಮತ್ತು 7 ನನ್ನ ಮಕ್ಕಳು. ಆರೋಪಿತನ ಪರಿಚಯ ನನಗೆ ಇರುತ್ತದೆ. ಆತನು ನನ್ನ ಮಗಳ ಗಂಡನಾಗಬೇಕು.

ನನಗೆ ವಿವಾಹ ದಿನಾಂಕವನ್ನು ಹೇಳಲು ಬರುವುದಿಲ್ಲ. ಈಗ ಐದು ವರ್ಷಗಳ ಹಿಂದೆ ಮೊದಲನೆ ಲಾಕಡೌನ ಸಮಯದಲ್ಲಿ ಆರೋಪಿತನ ಜೊತೆ ಬೀರಲಿಂಗೇಶ್ವರ ದೇವಸ್ಥಾನ, ಹೊನಗುಂಟದಲ್ಲಿ ಮದುವೆ ಮಾಡಿ ಕೊಟ್ಟಿದ್ದು ಇರುತ್ತದೆ. ಮದುವೆ ಸಮಯದಲ್ಲಿ ರೂ.51,000/- ನಗದು ಹಣ ಹಾಗೂ 2.5 ತೊಲೆ ಬಂಗಾರ ನೀಡಿದ್ದು ಇರುತ್ತದೆ.

ಮದುವೆಯಾದ ನಂತರ ಆರೋಪಿತನ ತಂದೆಯು ಚಾಸಾ-1 ಇವರನ್ನು ಕರೆಯಲು ಬಂದಿದ್ದು ಇರುತ್ತದೆ. ಮನೆಯ ಹೊರಗಡೆ ಕುಳಿತುಕೊಂಡು ಅಲ್ಲಿಂದಲೇ ಚಾಸಾ-1 ಇವರನ್ನು ಕರೆದುಕೊಂಡು ಹೋಗಿದ್ದು ಇರುತ್ತದೆ. ಕರೆದುಕೊಂಡು ಹೋದ ನಂತರ ಚಾಸಾ-1 ಇವರನ್ನು ಸರಿಯಾಗಿ ನೋಡಿಕೊಳ್ಳಲಿಲ್ಲ. ಜಗಳವು ನಡೆದ ದಿನಾಂಕ, ಸಮಯ ನನಗೆ ಹೇಳಲು ಬರುವುದಿಲ್ಲ. ಸುಮಾರು 3-4 ವರ್ಷಗಳ ಹಿಂದೆ ನಡೆದಿದ್ದು ಇರುತ್ತದೆ. ಜಗಳವು ಆರೋಪಿತನ ಮನೆಯಲ್ಲಿ ನಡೆದಿರುತ್ತದೆ. ಈ ಪ್ರಕರಣದಲ್ಲಿ ಫಿರ್ಯಾದಿಯನ್ನು ನನ್ನ ಮಗಳಾದ ಚಾಸಾ-1 ಇವರು ನೀಡಿರುತ್ತಾರೆ. ಈ ವಿಚಾರವನ್ನು ನಾನು ಪ್ರಥಮವಾಗಿ ನ್ಯಾಯಾಲಯದಲ್ಲಿ ಹೇಳಲು ಬಂದಿರುತ್ತೇನೆ.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಸಂಪೂರ್ಣ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ಆರೋಪಿತನು ಮದುವೆಯಾದಾಗಿನಿಂದ ಚಾಸಾ-1 ಇವರಿಗೆ ಮಾನಸಿಕ ಹಾಗೂ ದೈಹಿಕ ಹಿಂಸೆಯನ್ನು ನೀಡುತ್ತಾ ಬಂದಿರುತ್ತಾನೆ ಎಂದರೆ ಸರಿ. ನಾನು ಈ ವಿಚಾರವಾಗಿ ಆರೋಪಿತನಿಗೆ ಬುದ್ಧಿವಾದವನ್ನು ಹೇಳಿರುತ್ತೇನೆ ಎಂದರೆ ಸರಿ. ಆರೋಪಿತನ ಜೊತೆ ನನ್ನ ಮಗಳು ಗೌರಿಬಿದನೂರಿಗೆ ದುಡಿಯಲು ಹೋದಾಗ ಅಲ್ಲಿಯೂ ಸಹ ಆರೋಪಿ ಹಾಗೂ ಆತನ ಮನೆಯವರು ಚಾಸಾ-1 ಇವರಿಗೆ ಕಿರುಕುಳ ನೀಡಿರುತ್ತಾರೆ ಎಂದರೆ ಸರಿ. ಆರೋಪಿತರ ಕಿರುಕುಳವನ್ನು ತಾಳಲಾರದೇ ಗೌರಿಬಿದನೂರನ್ನು ತೊರೆದು ನಮ್ಮ ಮನೆಗೆ ಬಂದಿರುತ್ತಾಳೆ ಎಂದರೆ ಸರಿ.

ಸದರಿ ಜಗಳವು ದಿ: 15/03/2024 ರಂದು ಬೆಳಿಗ್ಗೆ 10 ಗಂಟೆ ಸುಮಾರಿಗೆ ನಡೆದಿರುತ್ತದೆ ಎಂದರೆ ಸರಿ. ಮನೆಯಲ್ಲಿ ಚಾಸಾ-1 ಇವರು ಇರುವಾಗ ಆರೋಪಿತನು ಹಾಗೂ ಆತನ ಪಾಲಕರು ಮನೆಗೆ ಬಂದು ಚಾಸ-1 ಇವರಿಗೆ ಎಷ್ಟು ಬಾರಿ ನ್ಯಾಯ ಪಂಚಾಯತಿ ಮಾಡುತ್ತಿಯ ಅಂತ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. ಆರೋಪಿತರು ಮತ್ತು ಅವನ ಕುಟುಂಬ ವರ್ಗದವರು ಪ್ರಾಣ ಬೆದರಿಕಯನ್ನು ಹೂಡಿರುತ್ತಾರೆ ಎಂದರೆ ಸರಿ.

ಈ ಜಗಳವನ್ನು ಚಾಸಾ-5 ರಿಂದ 8 ರವರು ಬಿಡಿಸಿರುತ್ತಾರೆ ಎಂದರೆ ಸರಿ. ಈ ಕುರಿತು ನಾನು ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ಆರೋಪಿತನು ನ್ಯಾಯಾಲಯದ ಮುಂದೆ ಉಪಸ್ಥಿತನಿರುತ್ತಾನೆ ಎಂದರೆ ಸರಿ. ನನ್ನ ಮಗಳ ಮದುವೆ ದಿ: 23/05/2021 ರಂದು ಜರುಗಿದ್ದು ಇರುತ್ತದೆ ಎಂದರೆ ಸರಿ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ**

ನಾನು ಅಶಿಕ್ಷಿತನಿರುತ್ತೇನೆ, ಓದಲು ಬರೆಯಲು ನನಗೆ ಬರುವುದಿಲ್ಲ. ಮದುವೆಯ ಸಮಯದಲ್ಲಿ ನಾನು ಆರೋಪಿತನಿಗೆ 2.5 ತೊಲೆ ಬಂಗಾರವನ್ನು ಹಾಗೂ ರೂ.51,000/- ನಗದು ಹಣವನ್ನು ನೀಡಿರುವ ಕುರಿತು ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಈ ವಿಚಾರವಾಗಿ ಯಾವುದೇ ದಾಖಲಾತಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಬೀಗರು ನನ್ನ ಮನೆಗೆ ಬಂದು ಚಾಸಾ-1 ಇವಳನ್ನು ಕರೆದುಕೊಂಡು ಹೋಗಿರುತ್ತಾರೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತನು ಚಾಸಾ-1 ಇವರಿಗೆ ದೈಹಿಕ ಮಾನಸಿಕ ಹಿಂಸೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಎಷ್ಟು ದಿನಗಳ ಬಳಿಕ ಪಂಚಾಯತಿ ಮಾಡಿರುತ್ತೇನೆ ಎಂದು ಹೇಳಿರವುದಿಲ್ಲ ಎಂದರೆ ಸರಿ. ಯಾವುದೇ ಕಾರಣವಿಲ್ಲದೇ ಚಾಸಾ-1 ಆರೋಪಿತನನ್ನು ತೊರೆದು ಬಂದಿರುತ್ತಾಳೆ ಎಂದರೆ ಸರಿಯಲ್ಲ. ನಾನು ಚಾಸಾ-1 ಇವರನ್ನು ಬೆಂಬಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೂ ಹಾಗೂ ಆರೋಪಿತನಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಚಾಸಾ-5 ರಿಂದ 8 ನಡೆದಿರುವ ಜಗಳನವನ್ನು ಬಿಡಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನಗೆ ಪ್ರಕರಣದ ಬಗ್ಗೆ ಯಾವುದೇ ವೈಯುಕ್ತಿಕ ಮಾಹಿತಿ ಇಲ್ಲದಿದ್ದರೂ ಸಹ ಚಾಸಾ-1 ಇವರಿಗೆ ಸಹಕರಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನ ವಿರುದ್ಧ ನನ್ನ ಮಗಳು ಫೊಟಗಿ ಅರ್ಜಿಯನ್ನು ಸಲ್ಲಿಸಿರುತ್ತಾಳೆ ಎಂದರೆ ಸರಿ. ಚಾಸಾ-1 ಘಟನೆಯಾದ 6 ತಿಂಗಳ 6 ದಿನದ ಬಳಿಕ ಪ್ರ.ವ.ವರದಿಯನ್ನು ಹಾಜರು ಮಾಡಿರುತ್ತಾಳೆ ಎಂದರೆ ಸರಿ. ನನ್ನ ಮಗಳು ಒಂದು ಖೊಟ್ಟಿ ದೂರನ್ನು ನೀಡಿರುತ್ತಾಳೆ ಎಂದರೆ ಸರಿಯಲ್ಲ.

ನನ್ನ ಮಗಳಿಗೆ ಆರೋಪಿತನು ವೈವಾಹಿಕ ಮರುಸ್ಥಾಪನೆ ಮಾಡಲು ಒಂದು ನೋಟೀಸನ್ನು ನೀಡಿರುತ್ತಾನೆ ಎಂದರೆ ಸಾಕ್ಷಿದಾರರು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿ ನಂ.2 ರಿಂದ 5 ಇವರ ವಿರುದ್ಧ ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಚಾಸಾ-1 ನೀಡಿರುವ ಈ ಪ್ರಕರಣದಿಂದ ಮೊಕುಟಗೊಳಿಸಲಾಗಿದೆ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚಾಸಾ-2, 3, 6 ರಿಂದ 8 ನಾವು ಒಂದೇ ಕುಲ ಜನಾಂಗದವರು ಎಂದರೆ ಸರಿ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ನನ್ನ ಮಗಳು ಒಂದು ಖೊಟ್ಟಿ ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**Sd/-**
**ಪ್ರ.ದ.ನ್ಯಾ.ದಂ.ಗಳು, ಶಹಾಬಾದ**